## ಯಾರೂ ಹೋಗಿಲ್ಲ...



ನಮ್ಮ ಸಂಬಂಧಿ ಅರವತ್ತೆಂಟರ ಗೋಪಾಲಯ್ಯನವರಿಗೆ ಪ್ರತಿದಿನ ರಾತ್ರಿ ಊಟದ ಬಳಿಕ ಮನೆಯಲ್ಲಿಯೇ ಬಿರುಸಿನಿಂದ ನಾಲ್ಕಾರು ಹೆಜ್ಜೆ ಹಾಕುವ ಅಭ್ಯಾಸ. ಒಮ್ಮೆ ಕಾರ್ಯ ನಿಮಿತ್ತ ಪರ ಊರಿನ ನೆಂಟರ ಮನೆಯಲ್ಲಿ ತಂಗಿದ್ದರು. ಅವರ ಮನೆ ತುಂಬಾ ಚಿಕ್ಕದಾಗಿತ್ತು. ರಾತ್ರಿಯ ಊಟದ ನಂತರ ನೆಂಟರ ಮನೆಯವರೆಲ್ಲ ಟೀವಿ ನೋಡುತ್ತಿದ್ದರು. ಆದರೆ, ಗೋಪಾಲಯ್ಯನವರು ಅಲ್ಲೇ ಜಾಗ ಮಾಡಿಕೊಂಡು ಅತ್ತಿಂದಿತ್ತ, ಇತ್ತಿಂದತ್ತ ಹೆಜ್ಜೆ ಹಾಕುತ್ತಿದ್ದರು. ಇದನ್ನೇ ಗಮನಿಸುತ್ತಿದ್ದ ಆ ನೆಂಟರ ಮನೆಯ ಐದು ವರ್ಷದ ಪುಟ್ಟ ಬಾಲಕಿ ಎದ್ದುಹೋಗಿ, ಅವರ ಕೈ ಹಿಡಿದು, 'ತಾತಾ, ಯಾರೂ ಹೋಗಿಲ್ಲ... ನೀವು ಹೋಗಿ...' ಎನ್ನುತ್ತ ತನ್ನ ಬೆರಳನ್ನು ಟಾಯ್ಲೆಟ್ ಕಡೆ ತೋರಿಸಿದಾಗ ಟೀವಿ ನೋಡತ್ತಿದ್ದವರೆಲ್ಲ ಮುಸಿ ಮುಸಿ ನಗಲಾರಂಭಿಸಿದರು.

**ಅರವಿಂದ ಜಿ. ಜೋಷಿ**

---

## ಖಜೂ-ಕತ್ರಿ



ನನ್ನ ಗೆಳೆಯ ಮಕ್ಕಳ ರಜೆಗೆಂದು ಕುಟುಂಬ ಸಮೇತ ದೆಹಲಿ ಪ್ರವಾಸಕ್ಕೆ ಹೋಗಿದ್ದ. ಹೋದವನು ತನ್ನ ಚಿಕ್ಕಪ್ಪನ ಮನೆಯಲ್ಲಿ ಉಳಿದುಕೊಂಡಿದ್ದ. ಒಂದು ಭಾನುವಾರ ಅವರ ಚಿಕ್ಕಪ್ಪನ ಮಗನ ಹುಟ್ಟುಹಬ್ಬವಿತ್ತು. ಅವರು ನನ್ನ ಸ್ನೇಹಿತನಿಗೆ, 'ನೀನು ಸುತ್ತಾಡಿಕೊಂಡು ಬರುವಾಗ ಖಜೂ–ಕತ್ರಿ ತೆಗೆದುಕೊಂಡು ಬಾ' ಎಂದು ಹೇಳಿ ಐನೂರು ರೂಪಾಯಿ ಕೊಟ್ಟಿದ್ದರು. ಇವನು ಸಂಜೆ ಮನೆಗೆ ಬರುವಾಗ ಪಕ್ಕದ ಬೀದಿಯಲ್ಲಿದ್ದ ಟೈಲರ್ ಅಂಗಡಿಗೆ ಹೋಗಿ 'ಕಾಜು–ಕತ್ರಿ ಕೊಡಿ' ಅಂದಿದ್ದಾನೆ. ಆತ ತನ್ನ ಅಂಗಡಿಯಲ್ಲಿ ಮಾರಾಟಕ್ಕಿಟ್ಟಿದ್ದ ಕಾಜು–ಕತ್ರಿಯನ್ನು ಕೊಟ್ಟಿದ್ದಾನೆ. ಈತ ಅದನ್ನೇ ತಂದು ತನ್ನ ಚಿಕ್ಕಪ್ಪನಿಗೆ ಕೊಟ್ಟಿದ್ದಾನೆ. ಗೋಡಂಬಿ ಬರ್ಫಿಗೆ 'ಖಜೂ–ಕತ್ರಿ' ಎನ್ನುತ್ತಾರೆ ಎನ್ನುವುದೂ ಇವನಿಗೆ ಗೊತ್ತಿಲ್ಲದ್ದು ನೋಡಿ ಅವರೆಲ್ಲಾ ನಕ್ಕಿದ್ದೇ ನಕ್ಕಿದ್ದು.

**ಬಿ.ಎನ್. ನರಸಿಂಹ ಮೂರ್ತಿ**